<u>ದಿನಾಂಕಃ **01-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಮುಂದು ವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ **HAS** ವಕೀಲರಿಂದಃ</u>

1. ನಮ್ಮ ಕಂಪನಿಯ ಜೊತೆ ಹೊಸದಾಗಿ ಗ್ರಾಹಕರು ವ್ಯವಹಾರ ಮಾಡುವ ಕಾಲಕ್ಕೆ ನಾವು ವ್ಯವಹಾರ ಸಂಬಂಧ ಯಾವುದೇ ಕರಾರನ್ನು ಮಾಡಿಕೊಳ್ಳುವುದಿಲ್ಲ. ನಾವು ಸದರಿ ಗ್ರಾಹಕರ ಕಡೆಯಿಂದ ಅವರ ಅಂಗಡಿಯ ಲೈಸನ್ಸ್, ಆಧಾರ ಕಾರ್ಡ ಮತ್ತು ಅವರ ಪೊಟೋವನ್ನು ತೆಗೆದುಕೊಳ್ಳುತ್ತೇವೆ. ನಮ್ಮ ಕಂಪನಿಯಿಂದ ಔಷದಿಯನ್ನು ಲೈಸನ್ಸ್ ಹೊಂದಿದ ಅಂಗಡಿಗಳಿಗೆ ಮಾರಾಟ ಮಾಡುತ್ತೇವೆ ಎಂದರೆ ಸರಿ. ಆರೋಪಿಯ ದಿವ್ಯ ಜ್ಯೋತಿ ಕೃಷಿ ಕೇಂದ್ರ ಅಂಗಡಿ ನಡೆಸುವ ಬಗ್ಗೆ ನಾವು ಅವರ ಕಡೆಯಿಂದ ಅಂಗಡಿ ಪರವಾನಿಗೆ ಪತ್ರ ಪಡೆದುಕೊಂಡಿರುತ್ತೇವೆ. ಸದರಿ ಪರವಾನಿಗೆ ಪತ್ರ ಯಾರ ಹೆಸರಲ್ಲಿ ಮತ್ತು ಎಲ್ಲಿಂದ ಎಲ್ಲಿಯ ಅವಧಿಯವರೆಗೆ ಚಾಲ್ತಿಯಲ್ಲಿತ್ತು ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ.

2. ನಿಪಿ -1 ಅನ್ನು ನಮ್ಮ ಕಂಪನಿಯ ಸೇಲ್ಸ್ ಆಫೀಸರಿಗೆ ನೀಡಿರುತ್ತಾರೆ. ನಿಪಿ-1 ಅನ್ನು ನಮ್ಮ ಕಂಪನಿಯ ಸೇಲ್ಸ್ ಆಫೀಸರ್ ಮೂಡುಬಿದಿರೆಯಲ್ಲಿ ಪಡೆದುಕೊಡಿರುತ್ತಾರೆ. ಆದರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ದಿಃ 21.10.2017 ರಂದು ಆರೋಪಿಯ ಕಡೆಯಿಂದ ಚೆಕ್ಕಿನಲ್ಲಿ ನಮೂದಿಸಿದ ಹಣ ಬಾಕಿ ಇರುವ ಬಗ್ಗೆ ಸ್ಟೇಟ್ ಮೆಂಟ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ-1 ರಲ್ಲಿ ನಮೂದಿಸಿರುವ ಬಾಕಿ ಹಣವನ್ನು ಕೊಡುವಂತೆ ನಾನು ಕೇಳಿರುವುದಿಲ್ಲ ಆದರೆ ಅವರು ಮೊದಲಿನಿಂದ ವ್ಯವಹಾರ ಮಾಡುತ್ತಿದ್ದು, ಈ ಬಾಕಿ ಹಣ ಇತ್ತು ಎಂದು ಉತ್ತರಿಸಿರುತ್ತಾರೆ. ಆರೋಪಿಯು ಈ ಹಿಂದೆ ಚೆಕ್ಕಿನ ಮುಖಾಂತರ ಹಣ ಪಾವತಿ ಮಾಡುತ್ತಿದ್ದು, ಆ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಪ್ರಕಾರ ಆರೋಪಿಯು ಕಂಪನಿಗೆ ಬಾಕಿ ಹಣವನ್ನು ಚೆಕ್ ಮುಖಾಂತರ ಪಾವತಿ ಮಾಡುತ್ತಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ಆ ರೀತಿ ಹಣ ಪಾವತಿ ಮಾಡಿದ ಬಗ್ಗೆ ನಮ್ಮ ಬಳಿ ದಾಖಲೆ ಇರುವುದಿಲ್ಲ.

3. ನಿಪಿ-1 ಚೆಕ್ಕಿನ ಮೊತ್ತವನ್ನು ನಮ್ಮ ಕಂಪನಿಗೆ ಬಾಕಿ ಹಣ ಕೊಡುವ ಸಂಬಂಧ ಆರೋಪಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿಯು ಹಣ ಬಾಕಿ ಉಳಿಸಿಕೊಂಡ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಆವಾಗ ಅಕೌಂಟ್ಸ್ ಮ್ಯಾನೇಜರ್ ಇರಲಿಲ್ಲ ಆದರೆ ಸೇಲ್ಸ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ಉತ್ತರಿಸಿರುತ್ತಾರೆ. ಆರೋಪಿ ಯಾವಾಗ ಮತ್ತು ಎಷ್ಟು ಮೊತ್ತದ ಹಣ ಬಾಕಿ ಉಳಿಸಿಕೊಂಡಿದ್ದರು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಾಕಿ ಹಣಕ್ಕಾಗಿ ಈ ಚೆಕ್ಕು ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನಗೆ ಈ ಪ್ರಕರಣದಲ್ಲಿ ಪ್ರತಿನಿಧಿಸಲು ನಮ್ಮ ಕಂಪನಿಯ ಎಂ.ಡಿ. ಅವರು ಅಧಿಕಾರ ಪತ್ರ ನೀಡಿರುತ್ತಾರೆ.

4. ಅಧಿಕಾರ ಪತ್ರ ಪಡೆಯುವ ಕಾಲಕ್ಕೆ ಆರೋಪಿಯ ಕಡೆಯಿಂದ ಎಷ್ಟು ಹಣ ಬಾಕಿ

ಇರುತ್ತದೆ ಎಂಬ ಬಗ್ಗೆ ನಾನು ದಾಖಲೆಯನ್ನು ಪರಿಶೀಲಿಸಿಲ್ಲ. ಸಾಕ್ಷಿ ಆ ಕಾಲಕ್ಕೆ ಅಂಗಡಿ ಬೇರೆ ಕಡೆ ಶಿಪ್ಟ್ ಆಗಿತ್ತು ಎಂದು ಉತ್ತರಿಸಿರುತ್ತಾರೆ. ನಾನು ಅಧಿಕಾರ ಪತ್ರ ಪಡೆಯುವ ಕಾಲಕ್ಕೆ ಹಾಗೂ ಈ ಕೇಸಿನ ವಿಚಾರಗಳ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸು ಕಳುಹಿಸಲು ಮತ್ತು ಪ್ರಕರಣ ದಾಖಲಿಸಲು ನಾನು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ನಮ್ಮ ಕಂಪನಿಯಿಂದ ಹೋಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿಯವರು ಗ್ರಾಹಕರು ಮೊದಲ ಬಾರಿಗೆ ಅಂಗಡಿಗೆ ಬಂದಾಗ ನಾವು ಅವರ ಕಡೆಯಿಂದ ಭದ್ರತೆಯ ಸಲುವಾಗಿ ಖಾಲಿ ಚೆಕ್ಕನ್ನು ಪಡೆಯುವ ಅಭ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ ಸಂಬಂಧಿಸಿದ ಈ ಚೆಕ್ಕನ್ನು ಹೊರತುಪಡಿಸಿ ಆತನ ಖಾತೆಗೆ ಸಂಬಂಧಿಸಿದ ಯಾವುದೇ ಬ್ಯಾಂಕಿನ ಅಥವಾ ಖಾತೆಯ ಚೆಕ್ಕುಗಳು ನಮ್ಮ ಬಳಿ ಇರುವುದಿಲ್ಲ. ಆರೋಪಿಯು ಸುಮಾರು 4-5 ವರ್ಷಗಳಿಂದ ನಮ್ಮ ಕಂಪನಿಯ ಜೊತೆ ಯಾವುದೇ ವ್ಯವಹಾರವನ್ನು ಮಾಡುತ್ತಿರುವುದಿಲ್ಲ.

5. ಆರೋಪಿಯು ಕಳಪೆ ಗುಣಮಟ್ಟದ ಔಷದಿಗಳನ್ನು ವಾಪಸ್ಸು ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಆರೋಪಿಯ ಕಡೆಯಿಂದ ನೀವು ಎಷ್ಟು ಮೌಲ್ಯದ ವಸ್ತುಗಳನ್ನು ವಾಪಸ್ಸು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ ನಾವು ಯಾವುದೇ ವಸ್ತುಗಳನ್ನು ಸ್ವೀಕರಿಸಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ಒಂದು ವೇಳೆ ಸ್ವೀಕರಿಸಿದರೆ ಆ ಮೊತ್ತವನ್ನು ಅವರ ಖಾತೆಯಲ್ಲಿ ಕಡಿತಗೊಳಿಸಿ ಕೊಡುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಪಿ-9 ರ ಪ್ರಕಾರ ಯಾವ ವರ್ಷದಿಂದ ಯಾವ ವರ್ಷದ ವರೆಗೆ ಸಂಬಂಧಿಸಿದ ದಾಖಲೆ ಇರುತ್ತದೆ ಎಂದು ನನಗೆ ದಾಖಲೆ ನೋಡಿ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ಆವಾಗ ಬೇರೆಯವರು ಇದ್ದರು ಎಂದು ಉತ್ತರಿಸಿರುತ್ತಾರೆ. ನಿಪಿ-9 ರಲ್ಲಿ ನಮೂದಿಸಿದ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.

6. ನಿಪಿ-9 ರಲ್ಲಿ ದಿಃ 25.10.2016 ರಂದು ಆರೋಪಿಯು ವಸ್ತುಗಳನ್ನು ವಾಪಸ್ಸು ಮಾಡಿದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮೊತ್ತವನ್ನು ಕಡಿತಗೊಳಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ದಿಃ 25.10.2016 ರ ನಂತರದ ವ್ಯವಹಾರದ ಬಗ್ಗೆ ದಾಖಲೆ ಹಾಜರುಪಡಿಸಬಹುದಾ ಎಂದರೆ ಸಾಕ್ಷಿ ಆಫೀಸ್ ಶಿಪ್ಟ್ ಮಾಡುವಾಗ ದಾಖಲೆ ಮಿಸ್ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ-9 ಅನ್ನು ನಮ್ಮ ಕಂಪನಿಯ ಕಂಪ್ಯೂಟರ್ ನ Excel Format ನಲ್ಲಿ ತಯಾರಿಸಿದ ದಾಖಲೆ ಇರುತ್ತದೆ ಎಂದರೆ ಸರಿ. ಸದರಿ ಮೂಲ ದಾಖಲೆಯ ಡಾಟಾ ನಮ್ಮ ಕಂಪನಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಕಛೇರಿ ಶಿಪ್ಟ್ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ವಾಪಸ್ಸಾದ ವಸ್ತುಗಳನ್ನು ಏನು ಮಾಡುತ್ತೀರಿ

ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ಕಂಪನಿಯ ಕೀಟ ನಾಶಕ ಅಥವಾ ರಸಗೊಬ್ಬರ ಕಳಪೆ ಮಟ್ಟದ್ದು ಎಂದು ಅಧಿಕೃತ ವರದಿ ಬಂದಾಗ ಸದರಿ ಸರಕಿಗೆ ಸಂಬಂಧಪಟ್ಟಂತೆ ನಮ್ಮ ಕಂಪನಿಯು ಜವಬ್ದಾರಿ ಇರುತ್ತದೆ ಎಂದರೆ ಸರಿ. ಯಾವುದೇ ಕೀಟ ನಾಶಕ ಮತ್ತು ರಸಗೊಬ್ಬರವನ್ನು ಪರವಾನಿಗೆ ಇಲ್ಲದೇ ತಯಾರು ಮಾಡುವುದು ತಪ್ಪು ಎಂದು ಕಂಡು ಬಂದರೆ ಅದಕ್ಕೆ ನಮ್ಮ ಕಂಪನಿಯೇ ಜವಬ್ದಾರಿ ಇರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ನಮೂದಿಸಿದ ಮೊತ್ತ ನಮ್ಮ ಕಂಪನಿಗೆ ಕಾನೂನು ಬದ್ಧವಾಗಿ ತಿರುವಳಿ ಮಾಡಲು ಬರುವ ಹಣ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕಂಪನಿಯು ಆರೋಪಿಗೆ ಕಳಪೆ ಗುಣಮಟ್ಟದ ವಸ್ತುಗಳನ್ನು ಸರಬರಾಜು ಮಾಡಿ ಆರೋಪಿಯು ಸದರಿ ವಸ್ತುಗಳನ್ನು ಪುನಃ ವಾಪಸ್ಸು ನಮ್ಮ ಕಂಪನಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ನಮಗೆ ಯಾವುದೇ ವಸ್ತುಗಳು ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾವು ಆರೋಪಿಗೆ ಸರಬರಾಜು ಮಾಡಿ ವಸ್ತುವನ್ನು ತಯಾರಿಸಿಸಲು ನಮಗೆ ಆ ಕಾಲಕ್ಕೆ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಕಡೆಯಿಂದ ಭದ್ರತೆಯ ಸಲುವಾಗಿ ಪಡೆದ ಚೆಕ್ಕನ್ನು ನಾವು ದುರುಪಯೋಗ ಪಡಿಸಿಕೊಂಡು ಈ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

7. ನಿಪಿ-1 ರಲ್ಲಿ ಬರವಣಿಗೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-1 ಚೆಕ್ಕು ಮಾಲೀಕರು ದಿವ್ಯ ಜ್ಯೋತಿ ಕೃಷಿ ಕೇಂದ್ರ ಇವರಿಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ದಿವ್ಯ ಜ್ಯೋತಿ ಕೃಷಿ ಕೇಂದ್ರ ಏಕ ಮಾಲೀಕತ್ವ ಅಥವಾ ಎಷ್ಟು ಜನರ ಮಾಲೀಕತ್ವಕ್ಕೆ ಒಳಪಟ್ಟಿರುತ್ತದೆ ಎಂಬುದರ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ಆರೋಪಿಯು ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡುವಷ್ಟು ಉಳಿಸಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದಲ್ಲಿ ಸಾಕ್ಷ ನುಡಿಯಲು ಯಾವುದೇ ಅಧಿಕಾರ ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ